ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಇಂಗ್ಲೀಷ್ ಉಪನ್ಯಾಸಕರ ಹುದ್ದೆಯನ್ನು ವರ್ಗಾವಣೆಯ ಮೂಲಕ ತುಂಬಿದೆ.

ಆ) ಖಾಲಿ ಇರುವುದಿಲ್ಲ.

ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ

3474 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ ಕಾರ್ಯಗಳ ಸಲುವಾಗಿ ಪ್ರತಿ ತಾಲ್ಲೂಕಿಗೆ ರೂ 25.00 ಲಕ್ಷಗಳನ್ನು ಮಂಜೂರು ಮಾಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿಗೆ 1989-90 ಮತ್ತು 1990-91ನೇ ಸಾಲಿನಲ್ಲಿ ಮೇಲ್ಕಂಡ ನಿಧಿಯಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.*

(ತಾಲ್ಲೂಕುವಾರು ವಿವರವನ್ನು ನೀಡುವುದು)

ಇ) *ಜಿಲ್ಲೆಯಲ್ಲಿ ಈ ನಿಧಿಯಿಂದ ಪ್ರತಿ ತಾಲ್ಲೂಕಿನಲ್ಲಿ ಕೈಗೊಂಡ ರಸ್ತೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರವನ್ನು ಒದಗಿಸುವುದು*

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :

ಅ) ಇಲ್ಲಾ.

ಆ) 'ಅ' ಗೆ ಕೊಟ್ಟ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಿರ್ಲೋಸ್ಕರ್ ವಿದ್ಯುತ್ ಕಂಪನಿಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ

3371 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಿರ್ಲೋಸ್ಕರ ವಿದ್ಯುತ್ ಕಂಪನಿಯ ನೌಕರರು ಗೃಹ ನಿರ್ಮಾಣ ಸಹಕಾರ ಸಂಘ ಒಂದನ್ನು ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಅದು ಈಗ ಅಸ್ಥಿತ್ವದಲ್ಲಿದೆಯೇ?*

ಆ) *ಸದರಿ ಸಂಘವು ಕೊಡಿಗೇಹಳ್ಳಿ ಎಂಬ ಸ್ಥಳದಲ್ಲಿ ನೌಕರಿಗಾಗಿ ಜಮೀನನ್ನು ಖರೀದಿ ಮಾಡಿ ಸಂಘದ ಸದಸ್ಯರುಗಳಿಂದ ಹತ್ತರು ಸಾವಿರ ರೂಪಾಯಿಗಳ ಡೆಪಾಜಿಟ್ಟುಗಳನ್ನು ಪಡೆದಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?*

ಇ) *ಸದರಿ ಜಮೀನನ್ನು ಸಂಘದ ಪರವಾಗಿ ಸ್ವಾಧೀನ ಪಡಿಸಿಕೊಳ್ಳಲು ಇರುವ ಅಡ್ಡಿ ಆತಂಕಗಳೇನು?*

ಈ) *ಸಂಘದ ಮೂಲ ಭೂತ ನೌಕರರಿಗಾಗಿ ನಿವೇಶನಗಳನ್ನು ಹಂಚುವ ಉದ್ದೇಶದಿಂದ ಕೊಡಿಗೆ ಹಳ್ಳಿಯಲ್ಲಿ ಖರೀದಿಸುವ ಜಮೀನಿನ ಬಾಬ್ತಿನಲ್ಲಿ ಹತ್ತಾರು ಸಾವಿರ ರೂಪಾಯಿಗಳನ್ನು ಸದಸ್ಯರ ಠೇವಣಿ ಮಾಡಿಯೂ ಕೂಡ ನಿವೇಶನ ಪಡೆಯದೆ ತ್ರಿಶಂಕು ಸ್ಥಿತಿಯಲ್ಲಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :